ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.739/2014 CW-20 PW-19

| | | |
|---|---|---|
| ಹೆಸರು | : | ಪ್ರವೀಣ |
| ತಂದೆಯ/ಗಂಡನ ಹೆಸರು | : | ಶಂಕರಪ್ಪ ಬಡಿಗೇರ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಶ್ರೀ ರಾಮ ವಿಮಾ ಕಂಪನಿಯ ಮ್ಯಾನೇಜರ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 13-03-2023

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ನಾನು 2010 ರಿಂದ 2016 ರವರೆಗೆ ಸಿಂಧನೂರಿನ ಶ್ರೀರಾಮ ಚಿಟ್ಸ್ ನಲ್ಲಿ ರಿಕವರಿ ಸಹಾಯಕನಾಗಿ ಕೆಲಸ ನಿರ್ವಹಿಸಿದ್ದೇನೆ. ಆಗ ಚಾಸಾ-1 ಅದರ ವ್ಯವಸ್ಥಾಪಕರಾಗಿದ್ದರು. ಆರೋಪಿತರ ಪರಿಚಯ ಇದೆ. ಅವರು ಬಂಗಾರದ ಸಾಲದ ಶಾಖೆಯನ್ನು ನೋಡಿಕೊಳ್ಳುತ್ತಿದ್ದರು.

ದಿಃ 21-09-2012 ರಂದು ನಾನು ಒಂದು ಬಂಗಾರದ ಚೈನು ಮತ್ತು ಹರಳಿನ ಉಂಗುರವನ್ನು ಗಿರವಿ ಇಟ್ಟು ರೂ.25,500/- ಬಂಗಾರದ ಸಾಲ ಪಡೆದಿದ್ದೆ. ಈ ಪ್ರಕರಣ ಬೆಳಕಿಗೆ ಬಂದ ನಂತರ ನಾನು ಆ ಸಾಲವನ್ನು ಮರುಪಾವತಿಸಿ ನಾನು ಗಿರಿವಿ ಇಟ್ಟ ಬಂಗಾರದ ಆಭರಣಗಳನ್ನು ಮರಳಿ ಪಡೆದುಕೊಂಡಿದ್ದೇನೆ.

ನಂತರ ಚಾಸಾ-1 ರವರಿಂದ ಆರೋಪಿತರು ಬೇರೆ ಬೇರೆಯವರ ಹೆಸರಲ್ಲಿ ಬಂಗಾರದ ಸಾಲವನ್ನು ಮಾಡಿ ಸುಮಾರು 54 ಲಕ್ಷದಷ್ಟು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹೇಳಿದರು. ಅದೇರೀತಿ 2013 ನೇಸಾಲಿನಲ್ಲಿ ಲೆಕ್ಕ ಪರಿಶೋಧಕಾರು ಬಂದಾಗ ಆರೋಪಿತರು ಕಂಪನಿಗೆ ಮೋಸ ಮಾಡಿದ್ದಾರೆ ಎಂದು ಚಾಸಾ-1 ರವರಿಂದ ಗೊತ್ತಾಯಿತು.

2012 ರಲ್ಲಿ ನಾನು ಬಂಗಾರದ ಸಾಲ ಪಡೆದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-10 ನ್ನು ಮತ್ತು ಅದರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿ ಸಹಿಗಳನ್ನು ಅವುಗಳ ಪೈಕಿ ಒಂದು ಸಹಿಯನ್ನು ನಿಪಿ-10 ಬಿ ಎಂದು ಗುರುತಿಸಲಾಯಿತು. ಈ ಬಗ್ಗೆ ಪೋಲೀಸರು ನಮ್ಮ ಕಛೇರಿಗೆ ಬಂದು ನನ್ನನ್ನು ವಿಚಾರಿಸಿದ್ದಾರೆ. ನಾನು ಹೇಳಿಕೆಯನ್ನು ನೀಡಿದ್ದೇನೆ.

ದಿಃ 25-08-2013 ರಂದು ಲೆಕ್ಕ ಪರಿಶೋಧಕರು ಬಂದಿದ್ದರು. ಆದರೆ ನನಗೆ ಅಷ್ಟೊಂದು ಮಾಹಿತಿ ಇಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು: ಮಾನ್ಯ ಸ ಸ ಅ ರವರಿಂದ</u>

ನನ್ನಂತೆ ಚಾಸಾ-4 ರಿಂದ 15 ರವರ ಹೆಸರಲ್ಲಿ ಬಂಗಾರದ ಸಾಲದ ದಾಖಲೆಗಳನ್ನು 1 ನೇ ಆರೋಪಿಯು ಸೃಷ್ಟಿಸಿದ ಬಗ್ಗೆ ನನಗೆ ಗೊತ್ತಾಗಿತ್ತು ಎಂದರೆ ಸರಿ. ಚಾಸಾ-16 ರಿಂದ 18 ರವರ ಕಡೆಯಿಂದ ಸಾಲದ ಹಣವನ್ನು ಪಡೆದು ಆಭರಣವನ್ನು ಅವರಿಗೆ ಮರಳಿ ನೀಡಿ, ಸಾಲದ ಹಣವನ್ನು ಬ್ಯಾಂಕಿಗೆ ಜಮಾ ಮಾಡದೇ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಗೊತ್ತಾಯಿತು ಎಂದರೆ ಸರಿ. 1 ನೇ ಆರೋಪಿಯು ದಿಃ 25-06-2013 ರಂದು 22-08-2013 ರ ಅವಧಿಯಲ್ಲಿ ಸುಮಾರು ರೂ.54,70,900/- ದಷ್ಟು ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಅದಕ್ಕೆ 2 ನೇ ಆರೋಪಿಯು ಸಹ ಬೀಗ ಕೊಟ್ಟು ಸಹಕರಿಸಿದ್ದಾಳೆ ಎಂದರೆ ಸರಿ.

<u>ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರಿಂದ</u>

ಶ್ರೀರಾಮ ಚಿಟ್ಸ್ ಬೇರೆ ಮತ್ತು ಬಂಗಾರದ ಸಾಲದ ಶಾಖೆ ಬೇರೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಸಾಲದ ಶಾಖೆ ಬೇರೆ ನಮ್ಮ ಶಾಖೆ ಬೇರೆ ಎಂದು, ಆದರೆ ಒಂದೇ ಕಟ್ಟಡದಲ್ಲಿ ಇವೆ ಎಂದು ನುಡಿಯುತ್ತಾರೆ. ಬಂಗಾರದ ಸಾಲದ ಶಾಖೆಯಲ್ಲಿ ಒಟ್ಟು ಎರಡು ಜನ ಕೆಲಸಗಾರರು ಇದ್ದರು. ಶಿವಕುಮಾರ ಎನ್ ಎನ್ನುವವರು ಬಂಗಾರದ ಸಾಲದ ಶಾಖೆಯ ವ್ಯವಸ್ಥಾಪಕರಾಗಿದ್ದರು. ಇಫ್ತೆಕಾರ ಹುಸೇನ ಎನ್ನುವವರು ಸಹ ಬಂಗಾರದ ಸಾಲದ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ, ಆದರೆ ಅವರು ಒಟ್ಟು ಲೆಕ್ಕ ಶಾಖೆಯನ್ನು ನೋಡಿಕೊಳ್ಳುತ್ತಿದ್ದರು. ನಮ್ಮ ಚಿಟ್ಸ್ ಫಂಡ್ ಶಾಖೆ ಮತ್ತು ಬಂಗಾರದ ಸಾಲದ ಶಾಖೆಯ ಒಟ್ಟು ಸಿಬ್ಬಂದಿ 20 ಜನ ಇದ್ದೆವು. ಆ ಎರಡು ವ್ಯವಹಾರಗಳನ್ನು ಒಂದೇ ಸಂಸ್ಥೆ ನಡೆಸುತ್ತಿತ್ತು. ಯಾರಾದರೂ ರಜೆ ಮೇಲೆ ಇದ್ದರೇ ಯಾರಿಗೆ ಪ್ರಭಾರ ವಹಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಚಾಸಾ-1 ರವರ ಹೇಳಿಕೆ ಮೇರೆಗೆ ಅವರು ಹೇಳಿದ್ದರಿಂದ ಗೊತ್ತಾದ ವಿಷಯವನ್ನು ಹೇಳುತ್ತಿದ್ದೇನೆ. ನನಗೆ ಬಂಗಾರದ ಸಾಲದ ಶಾಖೆಯ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಉಳಿದ ಸಾಲಗಾರರ ಸಾಲದ ಬಗ್ಗೆ ಮತ್ತು ಅವರ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಸಾಲಗಾರರು ಯಾರು ಮತ್ತು ಯಾವ ತರಹ ಖಾತೆ ಇದ್ದವು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಬಂಗಾರದ ಸಾಲದ ಶಾಖೆಯಲ್ಲಿ 12 ಜನ ಸಿಬ್ಬಂದಿ ಇದ್ದರು ಎಂದರೆ ಸರಿ ಅಲ್ಲ. ಆ ಸಿಬ್ಬಂದಿಗೆ ಯಾವ ಕರ್ತವ್ಯವನ್ನು ನಿರ್ವಹಿಸಲು ವಹಿಸಿಕೊಡಲಾಗಿತ್ತು ನನಗೆ ಗೊತ್ತಿಲ್ಲ ಎಂದರೆ ಸರಿ.

ಲೆಕ್ಕ ಪರಿಶೋಧನಾ ವರದಿಯನ್ನು ನಾನು ವೈಯಕ್ತಿಕವಾಗಿ ನೋಡಿಲ್ಲ. ಪೋಲೀಸರು ನಮ್ಮ ಸಂಸ್ಥೆಗೆ ಭೇಟಿ ಕೊಟ್ಟ ದಿನಾಂಕದ ಬಗ್ಗೆ ನನಗೆ ಮಾಹಿತಿ ಇಲ್ಲ, ಆದರೆ ಈ ಪ್ರಕರಣವಾದ ಒಂದು ವಾರದೊಳಗೆ ಬಂದಿದ್ದರು.

ಶಿವುಕುಮಾರ ಎನ್ ಮತ್ತು ಇಫ್ತೆಕಾರ ಹುಸೇನರವರ ಪೈಕಿ, ಶಿವಕುಮಾರ ಎನ್ ರವರ ವಿರುದ್ಧ ನಮ್ಮ ಸಂಸ್ಥೆಯವರು ಕ್ರಮ ಜರುಗಿಸಿದ್ದರು. ಚಾಸಾ-1 ರವರು ನಮ್ಮ ಮೇಲಾಧಿಕಾರಿ ಎಂದರೆ ಸರಿ. ಅವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಲೆಕ್ಕ ಪರಿಶೋಧನಾ ವರದಿಯಂತೆ ರೂ.54,70,900/- ದುರುಪಯೋಗಪಡಿಸಿಕೊಂಡು ಸಂಸ್ಥೆಗೆ ಮೋಸ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 2 ನೇ ಆರೋಪಿಯು 1 ನೇ ಆರೋಪಿಗೆ ಬೀಗ ನೀಡಿ ಸಹಕರಿಸಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ದಿಃ 25-08-2013 ರಂದು ಲೆಕ್ಕ ಪರಿಶೋಧಕರು ಬಂದ ಬಗ್ಗೆ ನಾನು ಪೋಲೀಸರಿಗೆ ಹೇಳಿರಬಹುದು. ಈ ರೀತಿ ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ **2** ನೇ ಆರೋಪಿ ಪರ ವಕೀಲರಿಂದ</u>

ನಾನು ಬಂಗಾರ ಅಡ ಇಟ್ಟು ಸಾಲ ಪಡೆದ ಬಗ್ಗೆ ಪೋಲೀಸರಿಗೆ ದಾಖಲೆ ನೀಡಿಲ್ಲ. 2 ನೇ ಆರೋಪಿಯು 1 ನೇ ಆರೋಪಿಗೆ ಬೀಗ ನೀಡಿ ಸಹಕರಿಸಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. (ಉಳಿದ 1 ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ).

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.